ಅದನ್ನು ನಿಷೇಧಿಸಲು ಮನಸ್ಸಿನೊಳಗೆ ಕೆಂಪುಗೆರೆಯ ಸೂಚನೆ ಇರುತ್ತದೆ. ಒಂದು ಸಲ ಅದನ್ನು ದಾಟಿದಮೇಲೆ ಮುಂದೆಲ್ಲೂ ಕೆಂಪುಗೆರೆ ಇರುವುದಿಲ್ಲ. ಹಾಗಾಗಿ ಒಂದು ಅಪರಾಧ ಮಾಡಿದವರು ಅದಕ್ಕಿಂತ ಹೆಚ್ಚು 'ರೋಚಕ'ವಾದ ಇನ್ನೊಂದನ್ನು ಮಾಡಲು ಉತ್ಸುಕರಾಗುತ್ತಾರೆ.

## ಮನೋವಿಜ್ಞಾನಿಗಳ ಪ್ರಕಾರ...

ಮನೋವಿಜ್ಞಾನಿಗಳ ಪ್ರಕಾರ ಅತ್ಯಾಚಾರಿಗಳ ಮನೋಭಾವ ಹೀಗಿರುತ್ತದೆ: ಅವರ ಕಾಮುಕತೆಯು ಕ್ರೋಧ, ಆಕ್ರಮಣಶೀಲತೆ ಹಾಗೂ ಪಾರಮ್ಯದೊಡನೆ ಬೆರೆತಿರುತ್ತದೆ. ಅವರು ಲೈಂಗಿಕ ಕ್ರಿಯೆಯಲ್ಲಿ ಸುಖ ಕಾಣುವ ಬದಲು ಬಲಿಯಾಗುವವರು ವ್ಯಕ್ತಪಡಿಸುವ ನೋವಿನಲ್ಲಿ ರೋಚಕತೆ ಕಾಣುವ ಹಿಂಸಾನಂದರು (ಅಮೆರಿಕದಲ್ಲಿ ಒಬ್ಬಳು ಅತ್ಯಾಚಾರವನ್ನು ತಪ್ಪಿಸಿಕೊಳ್ಳಲು ತನಗೆ ಎಚ್.ಐ.ವಿ. ಇದೆಯೆಂದು ಹೇಳಿದಳು. ಆಗ ಅವಳಿಗೆ ಕೋಲಿನಿಂದ ಅತ್ಯಾಚಾರ ಮಾಡಲಾಯಿತು).

ಸಾಮ್ಯುಯೆಲ್ ಸ್ಮಿತಿಮೆನ್ 1976ರಲ್ಲಿ ಅನೇಕ ಅತ್ಯಾಚಾರಿಗಳ ಜೊತೆಗೆ ಮಾತಾಡಿದ್ದಾನೆ. ಇವನು ಸಂದರ್ಶಿಸಿದ 50ಕ್ಕೂ ಹೆಚ್ಚಿನ ಅತ್ಯಾಚಾರಿಗಳು ಸಾಮಾನ್ಯರಂತೆಯೇ ಇದ್ದಾರೆ. ತಮ್ಮ ಬದುಕಿನಲ್ಲಿ ಇಂಥದ್ದನ್ನು ಬಹುಬೇಗ ಶುರುಮಾಡಿದ್ದು, ತಮ್ಮಂತೆ ಇರುವ ಇತರರ ಸಂಪರ್ಕ ಹೊಂದಿರುತ್ತಾರೆ. ಕೆದಕಿ ಕೇಳಿದಾಗ 'ತಾವು ಮಾಡಿದ್ದು ಒತ್ತಾಯವಷ್ಟೆ, ಅತ್ಯಾಚಾರವಲ್ಲ' ಎನ್ನುತ್ತಾರೆ. ಇವರೆಲ್ಲ ಆಕ್ರಮಣಕಾರಿ ಮನೋಭಾವದವರು. ಇವರಲ್ಲಿ ಕೆಲವರು ಪಶ್ಚಾತ್ತಾಪಪಟ್ಟಿದ್ದು, ಇನ್ನೊಂದು ಸಲ ಹಾಗೆ ಮಾಡುವುದು ಕಡಿಮೆ. ಆದರೆ ತಮಗೆ ಬಲಿಯಾದವರನ್ನೇ ಹೊಣೆ ಮಾಡುವವರು ('ಆಕೆಯೇ ನನ್ನನ್ನು ಕರೆದಿದ್ದು'), ಹೆಣ್ಣಿನ ನಿರಾಕರಣೆಯನ್ನು ಒಪ್ಪಿಗೆಯೆಂದು ನಂಬುವವರು ಬಹುಬೇಗ ಇನ್ನೊಂದು ಅಪರಾಧ ಮಾಡಬಲ್ಲರು. ಇವರು ಹೆಣ್ಣಿನ ಹಾಗೂ ಹೆಣ್ಣುತನದ ಬಗೆಗೆ ಕೀಳುಭಾಷೆ ಬಳಸುತ್ತಾರೆ. ಮದ್ಯ ಹಾಗೂ ಮಾದಕವಸ್ತು ಸೇವನೆ ಇವರಲ್ಲಿ ಹೆಚ್ಚಾಗಿದೆ. ಮುಖ್ಯವಾದ ವಿಷಯ ಏನೆಂದರೆ, ಅತ್ಯಾಚಾರಿ ಮನೋಭಾವ ಉಳ್ಳವರು ಹಠಾತ್ ಪ್ರವೃತ್ತಿ (impulsive nature) ತೋರುತ್ತಾರೆ. ಎಲ್ಲರ ತಲೆಯಲ್ಲೂ ಕಾಮದ ಮಿಂಚು ಮಿಂಚಿದರೂ ಅದನ್ನು ವಿವೇಕವು ಸಂಯಮದಲ್ಲಿ ಇಡುವ ನರತಂತುಗಳ ವ್ಯವಸ್ಥೆಯು ನಮ್ಮ ಮೆದುಳಿನಲ್ಲಿದೆ. ಅತ್ಯಾಚಾರಿಗಳಲ್ಲಿ ಇದು ಸಮರ್ಪಕವಾಗಿ ಸರಿಯಾಗಿ ಬೆಳೆದಿರುವುದಿಲ್ಲ. ಹಾಗಾಗಿ ಅತ್ಯಾಚಾರಿಗಳನ್ನು ಮಾನಸಿಕ ರೋಗಿಯೆಂದು ಪರಿಗಣಿಸಬೇಕು ಎನ್ನುವ ವಾದವಿದೆ.

## ಸಾಮೂಹಿಕ ಅತ್ಯಾಚಾರ

ಇಂಗ್ಲೆಂಡಿನ ಒಂದು ಸಂಸ್ಥೆಯು 71 ಸಾಮೂಹಿಕ ಅತ್ಯಾಚಾರದ ಪ್ರಕರಣಗಳನ್ನು ಅಧ್ಯಯನ ಮಾಡಿ ಕೆಲವು ಅಂಶಗಳನ್ನು ಬಯಲಿಗೆ ತಂದಿದೆ. ಇವರ ಗುಂಪಿನಲ್ಲಿ ನಾಯಕ ಎನ್ನಿಸಿಕೊಳ್ಳುವವ



ಇರುತ್ತಾನೆ. ಅವನನ್ನು ಮೆಚ್ಚಿಸಲು, ಅವನ ಕ್ರೂರ ಹಾಗೂ ಹಿಂಸಾತ್ಮಕ ನಡವಳಿಕೆಯನ್ನು ಗುಂಪಿನ ಉಳಿದವರು ಅನುಕರಿಸುತ್ತಾರೆ. ಅಲ್ಲದೆ ಇವರ ನಡುವೆ ಪೈಪೋಟಿಯೂ ಇರುತ್ತದೆ. ಪ್ರಬಲರೊಡನೆ ಗುರುತಿಸಿಕೊಳ್ಳಲು ದುರ್ಬಲರೂ ತಯಾರಾಗುತ್ತಾರೆ – ಭಾಗವಹಿಸದಿದ್ದಲ್ಲಿ ಅವಮಾನ ಕಾದಿರುತ್ತದೆ. ಹಾಗಾಗಿ ಒಬ್ಬರೇ ಮಾಡಲು ಧೈರ್ಯ ಸಾಲದಿರುವವರು ಗುಂಪಿನಲ್ಲಿ ಭಂಡರಾಗುತ್ತಾರೆ. ಗುಂಪಿನಲ್ಲಿ ಆತ್ಮಸಾಕ್ಷಿ ಅಷ್ಟಾಗಿ ಬಾಧಿಸುವುದಿಲ್ಲ.

ಸಾಮೂಹಿಕ ಅತ್ಯಾಚಾರಗಳು ಒಂಟಿ ಅತ್ಯಾಚಾರಕ್ಕಿಂತ ಭೀಕರವಾಗಿರುತ್ತವೆ. ಕಾರಣವೇನೆಂದರೆ, ಬಲಿಯಾಗುವವರು ಪ್ರತಿರೋಧ ತೋರಿಸಿದಾಗ ಅತ್ಯಾಚಾರಿಗಳು ತನ್ನತನವನ್ನು ಕಳೆದುಕೊಳ್ಳುತ್ತ ವಿವೇಕ – ಪ್ರಜ್ಞೆಯನ್ನು ಮರೆತುಬಿಟ್ಟು ಹಠಾತ್ತಾಗಿ ಮನಬಂದಂತೆ ವರ್ತಿಸುವುದರ ಜೊತೆಗೆ ಸ್ಪರ್ಧಾತ್ಮಕ ಮನೋಭಾವವನ್ನೂ ತೋರಿಸುತ್ತಾರೆ. ಇನ್ನೊಂದು ಮಹತ್ವದ ಅಂಶವೆಂದರೆ ಸಾಮೂಹಿಕ ಅತ್ಯಾಚಾರಿಗಳಲ್ಲಿ ಸಣ್ಣ ವಯಸ್ಸಿನವರೇ ಹೆಚ್ಚು. ಇದಕ್ಕೆ ಅವರಲ್ಲಿ ಸ್ರವಿಸುವ ಟೆಸ್ಟೋಸ್ಟೆರೋನ್ ಕೂಡ ಭಾಗಶಃ ಕಾರಣವಾಗುತ್ತದೆ. ಈ ಹಾರ್ಮೋನು ಹೆಚ್ಚಾದಷ್ಟೂ ಹೊಣೆಗೇಡಿತನ, ಆಕ್ರಮಣಶೀಲತೆ ಹೆಚ್ಚಾಗುತ್ತ ವಿವೇಚನೆಯಿಲ್ಲದ ಕೃತ್ಯಗಳಿಗೆ ಪ್ರೇರೇಪಿಸುತ್ತದೆ.

## 'ಮಾನ್ಯತೆ'ಯ ಅತ್ಯಾಚಾರಗಳು

ಎಷ್ಟೇ ಕಠೋರ ಕಾನೂನು ಇದ್ದರೂ ಅದರ ಮರೆಯಲ್ಲೇ ಅತ್ಯಾಚಾರಗಳು ನಡೆಯುತ್ತವೆ. ಅದರಲ್ಲಿ ಕೆಲವು ದೃಷ್ಟಾಂತಗಳು ಇಲ್ಲಿವೆ:

ಮುಜಾಫರ್ ನಗರದಲ್ಲಿ 2005ರಲ್ಲಿ ಇಮ್ರಾನಾಳ ಮೇಲೆ ಆಕೆಯ ಮಾವನೇ ಅತ್ಯಾಚಾರ ನಡೆಸಿದ. ಫಿರ್ಯಾದು ಮಾಡಿದಾಗ ಮಾವನಿಗೆ ಹೆಂಡತಿಯಾಗಲು, ಹಾಗೂ ತನ್ನ ಗಂಡನನ್ನು ಮಗನಂತೆ ಲೆಕ್ಕಿಸಲು ಫತ್ವಾ ಬಂದಿತು. ಇದಕ್ಕೆ ಕಾನೂನಿನ ಹೋರಾಟ ನಡೆಸದೇ ಇದ್ದಿದ್ದರೆ ಇಮ್ರಾನಾ ಮಾವನ ಹೆಂಡತಿಯಾಗಿ ಗಂಡನ ತಾಯಿಯಾಗುವ ಅನಿವಾರ್ಯತೆ ಇತ್ತು!

'ಅವನ ತಂಗಿಯ ಮೇಲೆ ನೀನು ಅತ್ಯಾಚಾರ ಮಾಡಿದ್ದೀಯಾ. ಅದಕ್ಕೆ ನಿನ್ನ ತಂಗಿಯ ಮೇಲೆ ಅವನು ಅತ್ಯಾಚಾರ ಮಾಡಲಿ' ಎಂದು ಹಳ್ಳಿಯ ಪಂಚಾಯತಿಯ ನಿರ್ಧಾರ ಆಗಿದ್ದಿದೆ.

ಅತ್ಯಾಚಾರಿಯನ್ನೇ ಮದುವೆಯಾಗುವ ಪದ್ಧತಿ 1970ರ ತನಕವೂ ವ್ಯಾಪಕವಾಗಿತ್ತು. ಆಗ ಅತ್ಯಾಚಾರಕ್ಕೆ ಒಳಗಾಗುವುದು ಕಳಂಕವೆಂದೂ, ಅಂಥವರ ಕುಟುಂಬದ ಮರ್ಯಾದೆ ಉಳಿಸಲು ಮದುವೆಯೇ ಪರಿಹಾರವೆಂದೂ ಭಾವಿಸಲಾಗುತ್ತಿತ್ತು. ಹಾಗಾಗಿ ಕೆಲವು ಗಂಡಸರು ತಮ್ಮನ್ನು ತಿರಸ್ಕರಿಸಿದ ಹೆಣ್ಣನ್ನು ಮದುವೆ ಆಗುವುದಕ್ಕೋಸ್ಕರ ಬಲಾತ್ಕರಿಸಿ 'ಕೆಡಿಸಿ'ದ್ದೂ ಇದೆ!

ವೇಶ್ಯಾಗಾರಿಕೆಯೂ ಇನ್ನೊಂದು ರೀತಿಯ ಅತ್ಯಾಚಾರ. ಇಲ್ಲಿ ಬಲಿಯಾದವರನ್ನು ಅರ್ಥಹೀನತೆಯ ಅರ್ಥಶಾಸ್ತ್ರದಿಂದ ಅಳೆಯಲಾಗುತ್ತದೆ. ಹಣವು ಆತ್ಮಸಮ್ಮಾನಕ್ಕೆ ಯಾವತ್ತೂ ಸರಿಸಾಟಿಯಲ್ಲ ಎಂಬುದನ್ನು ಎಲ್ಲ ಗಂಡಸರೂ ತಿಳಿದುಕೊಳ್ಳಬೇಕು.